# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 06-09-2016ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
| --- | --- |
| ಶ್ರೀಯುತರುಗಳಾದ : | |
| ಎಮ್. ಶಿವರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ – ಸದಸ್ಯರು | ಮುಖ್ಯಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, |
| ಆರ್.ಪದ್ಮಾವತಿ ಅಮರ್‌ನಾಥ್ – ಸದಸ್ಯರು | ಉಪ ನಿರ್ದೇಶಕರು (ತೋಟಗಾರಿಕೆ), |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ – ಸದಸ್ಯರು | ಉಪ ಕಾನೂನು ಅಧಿಕಾರಿ |
| ನೇತ್ರಾ ನಾರಾಯಣ್ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |
| ಉಮೇಸಲ್ಮ – ಸದಸ್ಯರು | -- |
| ಎ. ಕೋದಂಡರೆಡ್ಡಿ – ಸದಸ್ಯರು | -- |
| ಕೆ. ಪೂರ್ಣಿಮ – ಸದಸ್ಯರು | -- |
| ಕುಸುಮ. ಹೆಚ್ – ಸದಸ್ಯರು | -- |
| ಕೆ.ವಿ. ರಾಜೇಂದ್ರಕುಮಾರ್ – ಸದಸ್ಯರು | -- |
| ಅರುಣ ರವಿ – ಸದಸ್ಯರು | -- |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

***ವಿಷಯದ ಸಂಖ್ಯೆ: ತೆಆಸ್ಥಾಸ/43/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-07-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Shifting of Borewell at Konanakunte signal and UGD line at Doddakallasandra, Kanakapura main road in ward No 197 ಕಾಮಗಾರಿಯ ಅಂದಾಜು ಮೊತ್ತ ರೂ. 21.15 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾರ್ಯಪಾಲಕ ಅಭಿಯಂತರರು (ಬೆಂಗಳೂರು- ದಕ್ಷಿಣ) ರವರು ಪ್ರಸ್ಥಾವನೆ ಸಲ್ಲಿಸಿ, ಕಾಮಗಾರಿ ಕೈಗೊಳ್ಳಲು BMRCL ರವರು ರೂ. 21.50 ಲಕ್ಷಗಳ ಮೊತ್ತವನ್ನು ಚೆಕ್‌ಸಂಖ್ಯೆ 691575/ದಿನಾಂಕ 04-12-2015 ರಲ್ಲಿ ಪಾಲಿಕೆಗೆ ಜಮಾ ಮಾಡಲಾಗಿದೆ ಎಂದು ವರದಿಸಿರುತ್ತಾರೆ. Deposit Contribution ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ-2348 Deposit Contribution Works ಅಡಿ ಪರಿಗಣಿಸಬಹುದಾಗಿದೆ. 2016-17 ನೇ ಸಾಲಿನ ಆಯವ್ಯಯದಲ್ಲಿ (ಪುಟ ಸಂಖ್ಯೆ 143) ಲೆಕ್ಕಶೀರ್ಷಿಕೆ ಪಿ-2348 ನ ಚಾಲ್ತಿ ಕಾಮಗಾರಿಗಳ ಅಡಿ ರೂ. 10.00 ಲಕ್ಷಗಳ ಅನುದಾನ ಮಾತ್ರ ಮೀಸಲಿರಿಸಿದ್ದು, ಪ್ರಸ್ತಾವನೆಯ ಮೊತ್ತ ರೂ. 21.15 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ಅನುದಾನ ಕೊರತೆ ಇರುತ್ತದೆ. ಲೆಕ್ಕಶೀರ್ಷಿಕೆ ಪಿ-2348 ಅಡಿ ರೂ. 21.15 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದೆ. BMRCL ರವರು ರೂ. 21.50 ಲಕ್ಷಗಳ ಮೊತ್ತವನ್ನು ಪಾಲಿಕೆಗೆ ಜಮಾ ಮಾಡಿರುವುದರಿಂದ ರೂ. 21.15 ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ-2348 ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***ವಿಷಯದ ಸಂಖ್ಯೆ: ತೆಆಸ್ಥಾಸ/50/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ : 18-06-2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ. ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016-17ರ ಲೆಕ್ಕಶೀರ್ಷಿಕೆ "P-3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016-17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P-3106 ನ Current Works ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ. 6600.00 ಲಕ್ಷಗಳ ಅನುದಾನವನ್ನು 2016-17ರ ಲೆಕ್ಕಶೀರ್ಷಿಕೆ P-3106ನ Current Works ಅಡಿ ಅಳವಡಿಸಿಕೊಂಡು 310-17-000026 ರಿಂದ 310-17-000057ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***ವಿಷಯದ ಸಂಖ್ಯೆ: ತೆಆಸ್ಥಾಸ/51/2016-17***

ಆಯುಕ್ತರ ದಿನಾಂಕ: 18-06-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ-80 ಹೊಯ್ಸಳನಗರ ಸರ್ವೆ ನಂ:36ರಲ್ಲಿ ಲಕ್ಷ್ಮೀಪುರಂ ನಿವಾಸಿಗಳಿಗೆ ಕ್ರಯಪತ್ರವನ್ನು ನೊಂದಾಯಿಸಿಕೊಂಡು ಪಾಲಿಕೆ ವಿಷಯದ ಸಂಖ್ಯೆ:32(700) ದಿನಾಂಕ: 10-12-1985ರಲ್ಲಿ ತೆಗೆದುಕೊಂಡ ನಿರ್ಣಯದಂತೆ ದಿನಾಂಕ: 19-08-1987ರಂದು 122 ಫಲಾನುಭವಿಗಳಿಗೆ ಗುತ್ತಿಗೆ ಮತ್ತು ಕರಾರು ಪತ್ರವನ್ನು ನೊಂದಾಯಿಸಿಕೊಡಲಾಗಿರುತ್ತದೆಂದು, ಅದರಂತೆ ದಿನಾಂಕ: 20-03-1998ರಲ್ಲಿ ಜಂಟಿ ಆಯುಕ್ತರು (ಅಭಿವೃದ್ಧಿ) ರವರು ಕ್ರಯದ ಮೊತ್ತವನ್ನು ಕಂತಿನ ರೂಪದಲ್ಲಿ ಪಾವತಿಸುವ ಸಮಯದಲ್ಲಿ ತಡವಾಗಿ ಪಾವತಿಸಿರದೆ ಅಂತಹ ಫಲಾನುಭವಿಗಳಿಂದ ಬಡ್ಡಿಯನ್ನು ಸೇರಿಸಿ ಕ್ರಯದ ಮೊತ್ತವನ್ನು ಪಾವತಿಸಿಕೊಳ್ಳಬೇಕಾಗಿರುತ್ತದೆ ಎಂದು ವರದಿಸಿರುತ್ತಾರೆ. ಮಾನ್ಯ ಸ್ಥಳೀಯ ಶಾಸಕರು ಸದರಿ ನಿವಾಸಿಗಳಿಗೆ ಕ್ರಯಪತ್ರವನ್ನು ನೊಂದಾಯಿಸಿಕೊಡುವ ಬಗ್ಗೆ ಯಾವುದೇ ತರಹದ ಬಡ್ಡಿಯ ಹೊರೆಯನ್ನು ವಿಧಿಸದೇ ಬಡ್ಡಿ ಮನ್ನಾ ಮಾಡಿ ಕಟ್ಟಡದ ವೆಚ್ಚವನ್ನು ಮಾತ್ರ ಪಡೆದು ಕ್ರಯಪತ್ರ ನೊಂದಾಯಿಸಿಕೊಡಲು ಕೋರಿರುತ್ತಾರೆ.

ಈ ವಿಷಯದ ಬಗ್ಗೆ ಕಾನೂನು ಶಾಖೆಯ ಅಭಿಪ್ರಾಯ ಕೋರಲಾಗಿ ಕ್ರಯಪತ್ರ ವಿತರಿಸುವ ಬಗ್ಗೆ ಕೆ.ಎಂ.ಸಿ ಕಾಯ್ದೆ ಕಲಂ 176ರ ಅಡಿಯ ಸಕ್ಷಮ ಪ್ರಾಧಿಕಾರದ ಹಂತದಲ್ಲಿ ತೀರ್ಮಾನ ಕೈಗೊಳ್ಳಬಹುದಾಗಿದೆಯೆಂದು ಅಭಿಪ್ರಾಯಿಸಿರುತ್ತಾರೆ. ಹಾಗೂ ಉಪ ಆಯುಕ್ತರು (ಪೂರ್ವ) ರವರು ಕಂದಾಯ ಪರಿವೀಕ್ಷಕರು, ಕಂಡಿಕೆ (114) ರಲ್ಲಿ ಲಕ್ಷ್ಮೀಪುರ ಸ್ಲಂ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ನಿರ್ಮಿಸಲಾಗಿದೆಯೆಂದು ವರದಿಸಿರುವ ಹಿನ್ನೆಲೆಯಲ್ಲಿ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡುವ ಬ್ಗೆ ಆದೇಶವನ್ನು ಪಡೆದು ಕ್ರಮವಿಡುವ ಬಗ್ಗೆ ಮಂಡಿಸಿದ್ದು, ಜಂಟಿ ಆಯುಕ್ತರು(ಪೂರ್ವ) ರವರು ಮಾನ್ಯ ಆಯುಕ್ತರವರ ಅವಗಾಹನೆಗೆ ತಂದು ಮುಂದಿನ ಕ್ರಮನುಸಾರಣೆ ಮಾಡಬಹುದೆಂದು ವರದಿಸಿದ್ದು, ಸ್ಪಷ್ಟವಾದ ಅಭಿಪ್ರಾಯ ಮಂಡಿಸಿರುವುದಿಲ್ಲ. (ವಲಯದಿಂದ ಮೂಲ ಕಡತದೊಂದಿಗೆ ಮಂಡಿಸಿರುವುದಿಲ್ಲ).

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹುಡ್ಕೋ ಯೋಜನೆಯಡಿಯಲ್ಲಿ 1983-84 ರಿಂದ 2003-04ನೇ ಸಾಲಿನ ವರೆವಿಗೆ ವಾಂಬೆ ಯೋಜನೆಯಡಿ 2002-2009ರ ವರೆಗೆ ಒಟ್ಟು 58149 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದ್ದು, ಸದರಿ ಯೋಜನೆಯಡಿ ಫಲಾನುಭವಿಗಳಿಗೆ ಬಾಕಿ ಇರುವ ಸಾಲ 122.03 ಕೋಟಿ ಹಾಗೂ ಅಸಲು ರೂ.154.31 ಕೋಟಿ ಒಟ್ಟು 276.34 ಕೋಟಿ ರೂಗಳನ್ನು ಸರ್ಕಾರದ ಆದೇಶದ ಸಂಖ್ಯೆ: ವಇ 18 ಕೋಮಂಲೆ 2014 ಬೆಂಗಳೂರು ದಿನಾಂಕ:03-09-2014ರಂತೆ ಸಂಪೂರ್ಣ ಮನ್ನಾ ಮಾಡಿ ಆದೇಶಿಸಿರುತ್ತದೆ.

ಆದುದರಿಂದ, ಉಪ ಆಯುಕ್ತರು (ಪೂರ್ವ) ರವರ ವರದಿ ಹಾಗೂ ಜಂಟಿ ಆಯುಕ್ತರು (ಪೂರ್ವ) ರವರ ವರದಿಯಂತೆ (ವಸತಿ ಇಲಾಖೆಯ ಆದೇಶದ ಸಂಖ್ಯೆ:ವಇ 18 ಕೋಮಂಲೆ 2014 ಬೆಂಗಳೂರು ದಿನಾಂಕ: 03-09-2014) ಲಕ್ಷ್ಮೀಪುರಂ ಸ್ಲಂ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ನಿರ್ಮಿಸಲಾಗಿದೆಯೆಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ 122 ಜನ ಫಲಾನುಭವಿಗಳಿಗೆ ಅಸಲು ಮತ್ತು ಬಡ್ಡಿಯನ್ನು ದಿನಾಂಕ: 03-09-2014 ರ ಸರ್ಕಾರದ ಆದೇಶದಂತೆ ಮನ್ನಾ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬಿಬಿಎಂಪಿ ಸಭೆ ಮುಂದೆ ಮಂಡಿಸಿ

ಘನ ಸರ್ಕಾರದ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, **"ವಾರ್ಡ್ ಸಂಖ್ಯೆ: 80, ಲಕ್ಷ್ಮೀಪುರ ಸ್ಲಂ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ನಿರ್ಮಿಸಲಾಗಿರುವ ಮನೆಗಳ 122 ಫಲಾನುಭವಿಗಳಿಗೆ ಕ್ರಯಪತ್ರ ನೊಂದಾಯಿಸಿಕೊಡುವ ಕುರಿತು ಕಾನೂನು ಕೋಶದ ಅಭಿಪ್ರಾಯದಂತೆ ಸದರಿ ಫಲಾನುಭವಿಗಳಿಗೆ ಕ್ರಯಪತ್ರ ನೊಂದಾಯಿಸುವ ಸಂಬಂಧ ಮಂಡಿಸಲಾಗಿರುವ ಆಯುಕ್ತರ ದಿನಾಂಕ:18-06-2016ರ ಟಿಪ್ಪಣೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19.07.2016ರ ಸಭೆಯ ನಿರ್ಣಯ.**

**ನಿರ್ಣಯ: ಸರ್ಕಾರದ ಆದೇಶವನ್ನು ಒಪ್ಪಲು ಸಮಿತಿಯು ತೀರ್ಮಾನಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/52/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದಲ್ಲಿ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ 08-01-2016 ರಲ್ಲಿ ರೂ. 250.00

ಕೋಟಿಗಳ ವಿಶೇಷ ಅನುದಾನವನ್ನು ಮೀಸಲಿರಿಸಿದೆ. ಸರ್ಕಾರದ ಅನುಮೋದನೆಯಂತೆ 2015-16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿ ಪಿ-3089 ಅಡಿ ರೂ. 175.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ.75.00 ಕೋಟಿಗಳ ಪೈಕಿ ಪ್ರಸ್ಥುತ ನಅಇ 73 ಎಸ್‌ಎಫ್‌ಸಿ 2016, ಬೆಂಗಳೂರು ದಿನಾಂಕ: 25.06.2016ರಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ರೂ.20.00 ಕೋಟಿಗಳಿಗೆ ಅನುಮೋದನೆ ನೀಡಿದೆ. 2016-17ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಜಾಬ್‌ಸಂಖ್ಯೆ ನೀಡಿ ಕಾಮಗಾರಿ ಅನುಷ್ಠಾನಗೊಳಿಸಲು ಪಿ-3089 ಅಡಿ ರೂ.20.00 ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದ್ದು, ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***ವಿಷಯದ ಸಂಖ್ಯೆ: ತೆಆಸ್ಥಾಸ/54/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 123 ರಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 1.00 ಲಕ್ಷಗಳಿಗೆ ಲೆಕ್ಕಶಿರ್ಷಿಕೆ ಪಿ-0055 ಅಡಿ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ದಕ್ಷಿಣ) ರವರು ಕೋರಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಅನುದಾನದ ವಿವರಗಳನ್ನು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **12.14** | **137.11** | 0.75 | **1.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 1.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ.1.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17.08.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## ***ವಿಷಯದ ಸಂಖ್ಯೆ: ತೆಆಸ್ಥಾಸ/56/2016-17***

ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 22.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (SWM) ರವರು ಕೋಗಿಲು-ಕಣ್ಣೂರು ಮುಖ್ಯರಸ್ತೆಯಿಂದ ಬೆಳ್ಳಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ಪರ್ಯಾಯ ರಸ್ತೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 204.00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಯೋಜನೆ **ಸ್ವಚ್ಚ ಭಾರತ್ ಮಿಷನ್** ಅಡಿಯಲ್ಲಿ ಬಿಡುಗಡೆಯಾಗಿರುವ **ರೂ. 41.15 ಕೋಟಿಗಳಲ್ಲಿ** ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಲಭ್ಯವಿಲ್ಲದ ಬಗ್ಗೆ ಚರ್ಚಿಸಲಾಗಿ, ಅವಶ್ಯಕತೆಗೆ ಅನುಗುಣವಾಗಿ SWM ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಸಿದ್ದಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಆಯುಕ್ತರು ಕಾಮಗಾರಿ ಕೈಗೊಳ್ಳಲು ಜಾಬ್‌ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2016-17ರ ಆಯವ್ಯಯದ (ಪುಟಸಂಖ್ಯೆ-180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು- ಸ್ವಚ್ಚ ಭಾರತ್ ಅಭಿಯಾನದ ಕಾಮಗಾರಿಗಳು ಪಿ-3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ. 41.15 ಕೋಟಿ ಅನುದಾನವನ್ನು ಈಗಾಗಲೆ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ, ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 49.88 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ರೂ. 199.88 ಲಕ್ಷಗಳಿಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಸದರಿ ಪ್ರಸ್ತಾವನೆ ಮೊತ್ತ ರೂ. 204.00 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ರೂ. 204.00 ಲಕ್ಷಗಳ ಅನುದಾನದ ಕೊರತೆ ಇರುತ್ತದೆ. ಆಯವ್ಯಯದಲ್ಲಿ ಕೊರತೆ ಅನುದಾನಕ್ಕೆ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಚ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 204.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ರೂ. 204.00 ಲಕ್ಷಗಳಿಗೆ 310-17-000058 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## ***ವಿಷಯದ ಸಂಖ್ಯೆ: ತೆಆಸ್ಥಾಸ/57/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಡಿ.ಕೆ.ಸುರೇಶ್, ಮಾನ್ಯ ಲೋಕಸಭಾ ಸದಸ್ಯರು ಬೆಂಗಳೂರು ಗ್ರಾಮಾಂತರ ಜಿಲ್ಲೆ. ಬೆಂಗಳೂರು ರವರು, ಕೆಂಭತ್ತಹಳ್ಳಿ ಸರ್ವೆ ನಂ.55ರಲ್ಲಿ ಬಡಾವಣೆ ನಿರ್ಮಾಣ ಮಾಡಿ ನೈಜ ಫಲಾನುಭವಿಗಳನ್ನು ಗುರುತಿಸಿ ಹಕ್ಕು ಪತ್ರಗಳನ್ನು ವಿಸ್ತರಿಸಲು ಕೋರಿರುತ್ತಾರೆ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ, ಕೆಂಬತ್ತಹಳ್ಳಿ ಗ್ರಾಮದ ಸರ್ವೆ ನಂ.55 ರಲ್ಲಿ 8-10ಎಕರೆ ಸರ್ಕಾರಿ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಯಲ್ಲಿ ವಸತಿ ರಹಿತರಿಗೆ ಆಶ್ರಯ ಯೋಜನೆಗೆ ವಸತಿ ಒದಗಿಸುವ ಉದ್ದೇಶಕ್ಕಾಗಿ ಕಾಯ್ದಿರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಹಸ್ತಾಂತರಿಸಲು ಆದೇಶಿಸಲಾಗಿದೆ.

- ಸದರಿ ಜಮೀನನ್ನು ನಿಧಿಷ್ಟಪಡಿಸಿದ ಉದ್ದೇಶಕ್ಕಾಗಿ ಎರಡು ವರ್ಷಗಳ ಒಳಗಾಗಿ ಬಳಕೆ ಮಾಡತಕ್ಕದ್ದು.
- ಉದ್ದೇಶಿತ ಯೋಜನೆಗೆ ಈ ಜಮೀನು ಬಳಕೆಯಾಗದಿದ್ದಲ್ಲಿ ಸದರಿ ಜಮೀನು ಬೇಷರತ್ತಾಗಿ ಕಂದಾಯ ಇಲಾಖೆಯಲ್ಲಿ ನಿಹಿತವಾಗುತ್ತದೆ.

- ಪ್ರಶ್ನಿತ ಜಮೀನಿನ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ ಈ ಆದೇಶವನ್ನು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
- ಈ ಭೂಮಿಯಲ್ಲಿ ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಏನನ್ನು ಮಾಡತಕ್ಕದ್ದಲ್ಲ.
- ತಾಲ್ಲೂಕು ಮೋಜಣಿದಾರರು ಸದರಿ ಜಮೀನಿನ ಬಗ್ಗೆ ಅಳತೆ ಮಾಡಿ ಹದ್ದುಬಸ್ತು ನಿಗಧಿಪಡಿಸುವುದು.
- ಸದರಿ ಜಮೀನನ್ನು ಆಶ್ರಯ ಯೋಜನೆಗೆ ವಸತಿ ರಹಿತರಿಗೆ ವಸತಿ ಒದಗಿಸುವ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದಲ್ಲ.
- ಸರ್ಕಾರದ ಬೇರೆ ಯೋಜನೆಗೆ ಮೇಲ್ಕಂಡ ಜಮೀನು ಬೇಕಾಗಿದ್ದಲ್ಲಿ ಕೂಡಲೇ ಬಿಟ್ಟುಕೊಡತಕ್ಕದ್ದು.

ಮತ್ತು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ರವರು ಸದರಿ ಜಮೀನನ್ನು ಬಿ.ಬಿ.ಎಂ.ಪಿಗೆ ಹಸ್ತಾಂತರಿಸಲಾಗಿದೆ. ಈ ಹಿನ್ನಲೆಯಲ್ಲಿ ಸದರಿ ಸ್ಥಳದಲ್ಲಿ ವಸತಿ ರಹಿತರಿಗೆ ಆಶ್ರಯ ಯೋಜನೆಗೆ ವಸತಿ ಒದಗಿಸಲು ಯೋಜಿಸಲಾಗಿರುತ್ತದೆ. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಸದರಿ ಜಮೀನಿನಲ್ಲಿ ವಸತಿಗಳನ್ನು ವಿಂಗಡಿಸಿದ್ದು ಈ ಬಡಾವಣೆ ನಿರ್ಮಾಣ ಮಾಡಲು ಅವಶ್ಯಕವಾಗಿ ಬೇಕಾಗುವ ಕಾಮಗರಿಗಳಾದ, ರಸ್ತೆ ಮತ್ತು ಚರಂಡಿಗಳಿಗೆ ಲೋಕೋಪಯೋಗಿ ಇಲಾಖೆಯ 2015-16 ಸಾಲಿನ ದರಪಟ್ಟಿಯನ್ನು ಆಧಾರಿಸಿ ರೂ.802.20 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಈ ಪ್ರಸ್ತಾಪಿಸಿರುವ ಬಡಾವಣೆಯಲ್ಲಿ ರಸ್ತೆ ಮತ್ತು ಡ್ರೈನ್ ಕೆಲಸಗಳನ್ನು ಕೈಗೆತ್ತಿಕೊಳ್ಳಲು 2016-17ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿರುವ ಲೆಕ್ಕಶೀರ್ಷಿಕೆ ಪಿ-0001 ಅಡಿ ರೂ.2000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು ಈ ಅನುದಾನದ ಪೈಕಿ ರೂ.802.20 ಲಕ್ಷಗಳ ಮೊತ್ತವನ್ನು ಅನುಮೋದಿಸಲು ಸಮಿತಿಯ ಮುಂದೆ ಮಂಡಿಸಿದೆ.

**-ಮುಂದೂಡಿದೆ-**

***<u>ವಿಷಯದ ಸಂಖ್ಯೆ: ತೆಆಸ್ಥಾಸ/58/2016-17</u>***

ಆಯುಕ್ತರ ದಿನಾಂಕ:20.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಜಿ.ವೆಂಕಟಸ್ವಾಮಿ, ಅಧ್ಯಕ್ಷರು, ವಿಶ್ವನಾಥನಾಗೇನಹಳ್ಳಿ ಮನ್ನಾರಾಯನಪಾಳ್ಯ ದಸರ ಸಮಿತಿ (ರಿ), ಮನ್ನಾರಾಯನಪಾಳ್ಯ ಆರ್.ಟಿ.ನಗರ ಅಂಚೆ, ಬೆಂಗಳೂರು-32. ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ವಾರ್ಡ್ 22 ವಿಶ್ವನಾಥ ನಾಗೇನಹಳ್ಳಿ ಸೇರಿದ ವರ್ಷ ನವರಾತ್ರಿ ಹಬ್ಬವನ್ನು ದಿ: 13.10.2015 ರಿಂದ 23-10-2015 ರವರೆಗೆ 10 ದಿನಗಳ ಕಾಲ ವಿಜೃಂಭಣೆಯಿಂದ ಹಾಗು ಯಶ್ವಸಿಯಾಗಿ ಆಚರಿಸಿಕೊಂಡು ಬರುತ್ತಿರುತ್ತಾರೆ. ಪ್ರತಿ ವರ್ಷದಂತೆ 2015ನೇ ವರ್ಷವೂ ನವರಾತ್ರಿ ಉತ್ಸವವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸುತ್ತಿರುತ್ತಾರೆ. ಸದರಿ ಹಬ್ಬದ ಅಂಗವಾಗಿ 9 ದೇವರುಗಳ ಉತ್ಸವ, ಪಲ್ಲಕಿ ಉತ್ಸವ, ಡೊಳ್ಳು ಕುಣಿತ, ಸಾಂಸ್ಕೃತಿಕ ಕಾರ್ಯಕ್ರಮ, ರಸ ಸಂಜೆ, ಹಾಸ್ಯೋತ್ಸವ ಇತ್ಯಾದಿ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ ಹಾಗೂ ಅದೇ ರೀತಿ 9 ದೇವರುಗಳ ಹೂವಿನ ಪಲ್ಲಕಿ ಉತ್ಸವ ಇನ್ನೂ ಅನೇಕ ಕಾರ್ಯಕ್ರಮಗಳನ್ನು ದಸರ ಮಹೋತ್ಸವದಲ್ಲಿ ಆಚರಿಸಲಾಗಿರುತ್ತದೆ. ಸದರಿ ಎಲ್ಲಾ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ರೂ.15.00 ಲಕ್ಷಗಳ ಅನುದಾನ ನೀಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016-17 ನೇ ಸಾಲಿನ ಆಯವ್ಯಯದಲ್ಲಿ ಕೊಡುಗೆ ಮತ್ತು ಸಹಾಯಾನುಧನ ಲೆಕ್ಕಶೀಷಿಕೆ ಪಿ-0010ರ ಅಡಿಯಲ್ಲಿ ದಸರ

ಮಹೋತ್ಸವ (ಮುನಿರೆಡ್ಡಿ ಪಾಳ್ಯ-45ಲಕ್ಷಗಳು, ರಾಜ್‌ಮಹಲ್ ಗುಟ್ಟಹಳ್ಳಿ-05ಲಕ್ಷಗಳು, ವಿಶ್ವನಾಥ ನಾಗೇನಹಳ್ಳಿ ಮನ್ನರಾಯನಪಾಳ್ಯ-15ಲಕ್ಷಗಳು) ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ.65.00 ಲಕ್ಷಗಳ ಅನುದಾನ ಮೀಸರಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಿಶ್ವನಾಥನಾಗೇನಹಳ್ಳಿ ಮನ್ನಾರಾಯನಪಾಳ್ಯ ದಸರ ಸಮಿತಿ (ರಿ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ 2016-17ನೇ ಸಾಲಿನ ಆಯವ್ಯಯದಲ್ಲಿ ಈಗಾಗಲೇ ಮೀಸಲಿರಿಸಿರುವಂತೆ ರೂ.15.00 (ಹದಿನೈದು ಲಕ್ಷ ಮಾತ್ರ) ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/59/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 27.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 119ರಲ್ಲಿ ಕಟ್ಟಡ ಹಾಳಾಗಿದ್ದು, ಶಿಥಿಲಗೊಂಡಿರುತ್ತದೆ. ಮಳೆಗಾಲದಲ್ಲಿ ಈಗಾಗಲೇ ಕೆಲವಿ ಕಟ್ಟಡದ ಅವಶೇಷಗಳು ಬಿದ್ದು ಹೋಗಿರುತ್ತವೆ. ಸದರಿ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 2.90 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ-0055 ಅಡಿ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಚಿಕ್ಕಪೇಟೆ) ರವರು ಕೋರಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ: **P- 0055 "Encroachment clearance Expenses ( Demolition charges)" Budget Book Page No. 111** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **12.14** | **137.11** | 0.75 | **2.90** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 2.90 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಪೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 2.90 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 27.08.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/60/2016-17***

ಆಯುಕ್ತರ ದಿನಾಂಕ: 26.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಜೆ.ಸಿ.ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ, ಶ್ರೀ ಆದಿಶಕ್ತಿ ಸೇವಾ ಮಂಡಳಿ ದೇವಸ್ಥಾನ ಟ್ರಸ್ಟ್ (ರಿ), ಗಂಗಭವಾನಿ ಚಿನ್ನಪ್ಪ ಬಡಾವಣೆ, ಲಿಂಕ್ ರಸ್ತೆ, ಬೆನ್ಸನ್ ಟೌನ್ ಅಂಚೆ, ಬೆಂಗಳೂರು-46 ರವರು ಮಾನ್ಯ ಆಯುಕ್ತರರವರಿಗೆ ಮನವಿ ಸಲ್ಲಿಸಿ, ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.62, ರಾಮಸ್ವಾಮಿ ಪಾಳ್ಯದಲ್ಲಿ ಪ್ರತಿ ವರ್ಷದಂತೆ ಈ ವಷ್ಟು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ದೇವಸ್ಥಾನ ಸೇರಿದಂತೆ 40ಕ್ಕೂ ಹೆಚ್ಚು ಪಲ್ಲಕಿ / ತೇರುಗಳು ಪಾಲ್ಗೊಳ್ಳುತ್ತಿರುತ್ತವೆ ಸದರಿ ಕರ್ಯಕ್ರಮಗಳಿಗೆ ಸುಮಾರು 16.00 ಲಕ್ಷಗಳು ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.10.00 ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಶ್ರೀ ಆದಿಶಕ್ತಿ ಸೇವಾ ಮಂಡಳಿ ದೇವಸ್ಥಾನ ಟ್ರಸ್ಟ್ ರವರಿಗೆ 2015-16ನೇ ಸಾಲಿನಲ್ಲಿ ರೂ.5.00 ಲಕ್ಷಗಳ ಸಹಾಯಾನುಧನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ಮಂಜೂರು ಮಾಡಲಾಗಿರುತ್ತದೆ. ಆದರೆ ಅನುದಾನ ಲಭ್ಯವಿಲ್ಲದ ಕಾರಣ ಅನುದಾನ ಬಿಡುಗಡೆ ಮಾಡಿರುವುದಿಲ್ಲ, 2016-17ನೇ ಸಾಲಿನಲ್ಲಿ ಪಿ-0048 ಕೊಡುಗೆಗಳು ಮತ್ತು ಸಹಾಯಾನುಧನ ಅಡಿಯಲ್ಲಿ ಪಾವತಿಸಲು ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮಂಜೂರಾತಿಗಾಗಿ ಸಲ್ಲಿಸಲು ಆದೇಶಿಸಿರುತ್ತಾರೆ.

ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆ ಪಿ-0048ರಲ್ಲಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ ಹಾಗೂ 2016-17ನೇ ಸಾಲಿನ ಆಯವ್ಯಯದಲ್ಲಿ ಅನುಬಂಧ-2ರಲ್ಲಿ 30 ಸಂಘ/ಸಂಸ್ಥೆಗಳಿಗೆ ಅನುದಾನ ಮೀಸಲಿರಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಶ್ರೀ ಆದಿಶಕ್ತಿ ಸೇವಾ ಮಂಡಳಿ ದೇವಸ್ಥಾನ ಟ್ರಸ್ಟ್ (ರಿ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ. 5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/61/2016-17***

ಆಯುಕ್ತರ ದಿನಾಂಕ: 26.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕನ್ನಡಿ ಟ್ರಸ್ಟ್, ವಿ.ಸಿ.ಎನ್. ಕಾಂಪ್ಲೆಕ್ಸ್, ಪ್ಲಾಟ್ ನಂ.1, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಸದರಿ ಸಂಸ್ಥೆಯು ಕಳೆದ 6 ವರ್ಷಗಳ ಹಿಂದೆ ಸ್ಥಾಪನೆಯಾದ ಕನ್ನಡಿ ಟ್ರಸ್ಟ್ ವಿವಿಧ ಸಮಾಜಿಕ ವಿಚಾರಗಳ ಬಗ್ಗೆ ಜನ ಜಾಗೃತಿ ಮೂಡಿಸುವುದರ ಜೊತೆಗೆ ನಿರುದ್ಯೋಗಿ ಯುವಕ ಯುವತಿಯರಿಗೆ ಉಚಿತ ಉದ್ಯೋಗ ತರಬೇತಿಗಳನ್ನು ನಡೆಸಿಕೊಂಡು ಬರುತ್ತಿದ್ದು, ವಿಶೇಷವಾಗಿ ಇದು ಅಗಾಧವಾಗಿ ಬೆಳೆದಿರುವ ಮಾಧ್ಯಮ ಕ್ಷೇತ್ರದಲ್ಲಿರುವ ವಿಪುಲ ಅವಕಾಶಗಳನ್ನು ಬಡ ಮತ್ತು ಹಿಂದುಳಿದ ವರ್ಗದ ಯುವ ಸಮೂಹ ಸಮರ್ಥವಾಗಿ ಬಳಸಿಕೊಳ್ಳುವಂತೆ ಮಾಡಲು ಕನ್ನಡಿ ಟ್ರಸ್ಟ್ ಸಾಕಷ್ಟು ಶ್ರಮಿಸುತ್ತಿದ್ದು, ಇದಕ್ಕಾಗಿ ಇದೀಗ ಅತ್ಯುತ್ತಮ ಸೌಲಭ್ಯಗಳನ್ನೊಳಗೊಂಡ ಉಚಿತ ಮಾಧ್ಯಮ ಗ್ರಂಥಾಲಯವನ್ನು ಸ್ಥಾಪಿಸಿದೆ. ಪತ್ರಿಕೋದ್ಯಮ ವಿದ್ಯಾರ್ಥಿಗಳು ಮತು ಪತ್ರಕರ್ತರಿಗೆ ಉಪಯೋಗವಾಗುವ ಸೌಲಭ್ಯವನ್ನು ನಿರಂತರವಾಗಿ ಉದ್ಯೋಗ ತರಬೇತಿಯನ್ನು ಪಡೆಯುತ್ತಿರುತ್ತಾರೆ. ಈಗಾಗಲೇ ಕನ್ನಡಿ ಟ್ರಸ್ಟ್‌ನ ಕಾರ್ಯಗಳನ್ನು ಅರಿತಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಟ್ರಸ್ಟ್‌ನ ಕಾರ್ಯಗಳನ್ನು ಉತ್ತೇಜಿಸುವ ದೃಷ್ಟಿಯಿಂದ 2014-15ನೇ ಸಾಲಿನಲ್ಲಿ ಅನುದಾನವನ್ನು ನೀಡಿದೆ ಇದನ್ನು ಉದ್ದೇಶಿತ ಕಾರ್ಯಗಳಿಗೆ ಸರ್ಮಪಕವಾಗಿ ಬಳಸಿಕೊಳ್ಳಲಾಗಿದ್ದು ಸಮಾಜಿಕ ಕಾರ್ಯಗಳನ್ನು ಮುಂದುವರೆಸಿಕೊಂಡು

ಹೋಗುವುದಕ್ಕೆ ಬಿಬಿಎಂಪಿ ವತಿಯಿಂದ 2015-16ನೇ ಸಾಲಿನಲ್ಲಿ ರೂ.10.00 ಲಕ್ಷಗಳ ಅನುದಾನ ನೀಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆ ಪಿ-0048ರಲ್ಲಿ ರೂ500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ ಹಾಗೂ 2016-17ನೇ ಸಾಲಿನ ಆಯವ್ಯಯದಲ್ಲಿ ಅನುಬಂಧ-2ರಲ್ಲಿ 30 ಸಂಘ / ಸಂಸ್ಥೆಗಳಿಗೆ ಅನುದಾನ ಮೀಸಲಿರಿಸಲಾಗಿರುತ್ತದೆ. ಸದರಿ ಸಂಸ್ಥೆಗಳಲ್ಲಿ ಸದರಿ ಸಂಸ್ಥೆಗೆ ಅನುದಾನ ಮೀಸಲಿರಿಸಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಕನ್ನಡಿ ಟ್ರಸ್ಟ್ (ರಿ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ. 5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/62/2016-17***

ಆಯುಕ್ತರ ದಿನಾಂಕ: 26.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಎಂ.ನರಸಿಂಹ, ಗೌರವ ಕಾರ್ಯದರ್ಶಿ, ಉದಯಭಾನು ಕಲಾ ಸಂಘ (ರಿ), ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು-19 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಸದರಿ ಸಂಘವು ಕಳೆದ ಸುಮಾರು ಅರ್ಧ ಶತಮಾನದಿಂದ ನಿರಂತರವಾಗಿ ನಾಡು, ನುಡಿ, ಸಾಹಿತ್ಯ, ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ, ನಗರ ಕಲ್ಯಾಣ ಮುಂತಾದ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುತ್ತದೆ ಹಾಗೂ ಮಹಾನಗರ ಪಾಲಿಕೆ ಸಂಘದ ನಗರ ಕಲ್ಯಾಣ ಕಾರ್ಯಕ್ರಮಗಳನ್ನು ಮೆಚ್ಚಿ ಆಟದ ಮೈದಾನಕ್ಕೆ ಉದಯಭಾನು  ಕಲಾಸಂಘ ಆಟದ ಮೈದಾನ ಎಂದು ನಾಮಕರಣ ಮಾಡುವ ಮೂಲಕ ಸಂಘಕ್ಕೆ ಪೌರಸನ್ಮಾನ ಸಂದಿದೆ, ಸದರಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2015-16ರಲ್ಲಿ ಸಂಘದ ಸುವರ್ಣ ಮಹೋತ್ಸವದ ಅಂಗವಾಗಿ ಮತ್ತು ಬೆಂಗಳೂರು ದರ್ಶನ ಬೃಹತ್ ಕೃತಿಗಳ ಪ್ರಕಟಣೆಗಾಗಿ ರೂ.25.00 ಲಕ್ಷಗಳ ಅನುದಾನ ನೀಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆ ಪಿ-0048 ರಲ್ಲಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ ಹಾಗೂ 2016-17ನೇ ಸಾಲಿನ ಆಯವ್ಯಯದಲ್ಲಿ ಅನುಬಂಧ-2ರಲ್ಲಿ 30 ಸಂಘ / ಸಂಸ್ಥೆಗಳಿಗೆ ಅನುದಾನ ಮೀಸಲಿರಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಉದಯಭಾನು ಕಲಾ ಸಂಘ (ರಿ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ. 8.00 (ಎಂಟು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/63/2016-17***

ಆಯುಕ್ತರ ದಿನಾಂಕ: 30.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಕೆ.ವಿ.ರಮೇಶ್, ಪ್ರಧಾನ ಕಾರ್ಯದರ್ಶಿ, ಚಾಲುಕ್ಯ ಡಾ|| ರಾಜ್‌ಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್ (ನೋ) ನಂ.32, ಕುಮಾರವ್ಯಾಸ ವೃತ್ತ, ಕುರುಬರಹಳ್ಳಿ ಬಸ್ ನಿಲ್ದಾಣ, ಬೆಂಗಳೂರು-86. ರವರು ಮಾನ್ಯ ಆಯುಕ್ತರು ರವರಿಗೆ ಅರ್ಜಿ ಸಲ್ಲಿಸಿ, ತಮ್ಮ ಟ್ರಸ್ಟ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವು ಕನ್ನಡ ಉತ್ಸವ, ಡಾ||

ರಾಜ್ ಕುಮಾರ್ ಉತ್ಸವ, ಸಾಹಿತಿಗಳಿಗೆ ಮತ್ತು ಮೂಲ ಕಲಾವಿದರಿಗೆ ಹಾಗೂ ಜಾಗೃತಿ ಕಾರ್ಯಕ್ರಮಗಳಿಗೆ ಸುಮಾರು 45.25 ಲಕ್ಷಗಳು (ನಲವತ್ತೈದು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ) ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2016–17ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಚಾಲುಕ್ಯ ಡಾ॥ ರಾಜ್‌ಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್ (ನೋ) ಮೀಸಲಿಟ್ಟಿರುವ ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ–048 ಕೊಡುಗೆಗಳು ಮತ್ತು ಸಹಾಯಧನ ಪುಟ ಸಂಖ್ಯೆ: 162ರಲ್ಲಿ ಪಿ–3152 ಚಾಲುಕ್ಯ ಡಾ॥ ರಾಜ್‌ಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್ (ನೋ) ಕನ್ನಡ ಉತ್ಸವಕ್ಕಾಗಿ ರೂ.25.00ಲಕ್ಷಗಳ ಅನುದಾನ ಮೀಸರಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಚಾಲುಕ್ಯ ಡಾ॥ ರಾಜ್‌ಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್ (ನೋ) ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ 2016–17ನೇ ಸಾಲಿನ ಆಯವ್ಯಯದಲ್ಲಿ ಈಗಾಗಲೇ ಹಂಚಿಕೆಯಾಗಿರುವಂತೆ ರೂ.25.00 (ಇಪ್ಪತ್ತೈದು ಲಕ್ಷ ಮಾತ್ರ) ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸಮಿತಿಯು ತೀರ್ಮಾನಿಸಿತು.**

***ಹೆಚ್ಚುವರಿ ವಿಷಯ:–***

***ವಿಷಯದ ಸಂಖ್ಯೆ: ತೆಆಸ್ಥಾಸ/64/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 31.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Providing RCC drain and cement concrete road at Nalbund lane in ward no.120 ಕಾಮಗಾರಿಯ ಅಂದಾಜು ಮೊತ್ತ ರೂ.12.00 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲು ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ವಾರ್ಡ್ 120ರ ನಲ್‌ಬಂಡ್ ಲೇನ್‌ನಲ್ಲಿರುವ ಚರಂಡಿ ಪಕ್ಕ ಮೆಟ್ರೋ ಸ್ಟೇಷನ್ ಕಾಮಗಾರಿ ನಡೆಯುತ್ತಿರುವುದರಿಂದ ಬದಲಿ ಚರಂಡಿ ನಿರ್ಮಾಣ ಮಾಡಲು BMRCL ರವರು ರೂ.12.00 ಲಕ್ಷಗಳ ಮೊತ್ತವನ್ನು ಚೆಕ್ ಸಂಖ್ಯೆ : 291499/ದಿನಾಂಕ: 24.11.2015ರಲ್ಲಿ ಆಯುಕ್ತರು, ಬೃಹತ್ ಬೆಂಗಳೂರು ಮಹನಗರ ಪಾಲಿಕೆ, ಬೆಂಗಳೂರು ಇಲ್ಲಿಗೆ ಜಮಾ ಮಾಡಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ) ರವರು ವರದಿಸಿರುತ್ತಾರೆ. ರೂ.12.0 ಲಕ್ಷಗಳನ್ನು ಪಾಲಿಕೆಯ ಖಾತೆ ಸಂಖ್ಯೆ: 8401132000019ಗೆ ಜಮಾ ಆಗಿರುವುದಾಗಿ ಮುಖ್ಯ ಲೆಕ್ಕಾಧಿಕಾರಿಗಳು ವರದಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಲೆಕ್ಕಶೀಷಿಕೆ ಪಿ–2348 Deposit Contribution Works ಅಡಿ ಪರಿಗಣಿಸಬಹುದಾಗಿದೆ. 2016–17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀಷಿಕೆ ಪಿ–2348ನ ಚಾಲ್ತಿ ಕಾಮಗಾರಿಗಳ ಅಡಿ ರೂ.10.00 ಲಕ್ಷಳ ಅನುದಾನ ಮೀಸಲಿರಿಸಿದ್ದು, ಪ್ರಸ್ತಾವನೆಯ ಮೊತ್ತ ರೂ.12.00 ಲಕ್ಷಗಳಾಗಿದ್ದು, ರೂ.2.00 ಲಕ್ಷಗಳ ಅನುದಾನ ಕೊರತೆ ಇರುತ್ತದೆ. 2016–17ರ ಲೆಕ್ಕಶೀರ್ಷಿಕೆ ಪಿ–2348 ರೂ.12.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಬಿ.ಎಂ.ಆರ್.ಸಿ.ಎಲ್ ವತಿಯಿಂದ ಸದರಿ ಕಾಮಗಾರಿಗೆ ರೂ.12.00 ಲಕ್ಷಗಳನ್ನು ಪಾಲಿಕೆಗೆ ಸಂದಾಯ ಮಾಡಲಾಗಿರುವುದರಿಂದ ಸದರಿ ಮೊತ್ತಕ್ಕೆ ಜಾಬ್ ಸಂಖ್ಯೆ ನೀಡಲು ಸಮಿತಿಯು ಒಪ್ಪಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/67/2016-17***

ಆಯುಕ್ತರ ದಿನಾಂಕ: 03.09.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಟಿ.ಗೋವಿಂದರಾಜು, ಕಾರ್ಯದರ್ಶಿ, ಮಹಾಲಕ್ಷ್ಮಿ ಎಜುಕೇಷನಲ್ ಟ್ರಸ್ಟ್ (ರಿ), ವಿ.ಹೆಚ್.ಬಿ.ಸಿ.ಎಸ್. ಲೇಔಟ್, ಬೆಂಗಳೂರು ನಂ.73, 3ನೇ ಮುಖ್ಯರಸ್ತೆ, ವಿಹೆಚ್‌ಬಿಸಿಎಸ್. ಲೇಔಟ್, ಕುರುಬರಹಳ್ಳಿ, ಬೆಂಗಳೂರು-86. ರವರು ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಅರ್ಜಿ ಸಲ್ಲಿಸಿ, ತಮ್ಮ ಟ್ರಸ್ಟ್ ವತಿಯಿಂದ ಶ್ರೀ ಮಹಾಲಕ್ಷ್ಮೀ ವೃದ್ಧಾಶ್ರಮವನ್ನು ಉಚಿತವಾಗಿ ನಡೆಸುತ್ತಿದ್ದು, ವೃದ್ಧರಿಗೆ ಉಚಿತವಾಗಿ ಊಟ, ವಸತಿ, ವೈದ್ಯಕೀಯ ಮತ್ತು ಇತರೆ ಸೌಲಭ್ಯಗಳನ್ನೊಳಗೊಂಡ ಸದರಿ ವೃದ್ಧಾಶ್ರಮದ ಕಾರ್ಯಕ್ರಮಗಳಿಗೆ ಸುಮಾರು 10.00 ಲಕ್ಷಗಳು (ಹತ್ತು ಲಕ್ಷ ಮಾತ್ರ) ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2016-17ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಶ್ರೀ ಮಹಾಲಕ್ಷ್ಮಿ ಎಜುಕೇಷನಲ್ ಟ್ರಸ್ಟ್ (ರಿ), ವಿ.ಹೆಚ್.ಬಿ.ಸಿ.ಎಸ್. ಲೇಔಟ್, ಬೆಂಗಳೂರು ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನ ಅನುಬಂಧ-2ರ ಕ್ರಮ ಸಂಖ್ಯೆ: 29ರಲ್ಲಿ ಶ್ರೀ ಮಹಾಲಕ್ಷ್ಮಿ ಎಜುಕೇಷನಲ್ ಟ್ರಸ್ಟ್ (ರಿ), ವಿ.ಹೆಚ್.ಬಿ.ಸಿ.ಎಸ್. ಬೆಂಗಳೂರು ರವರ ರೂ.5.00ಲಕ್ಷಗಳ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಶ್ರೀ ಮಹಾಲಕ್ಷ್ಮಿ ಎಜುಕೇಷನಲ್ ಟ್ರಸ್ಟ್ (ರಿ), ವಿ.ಹೆಚ್.ಬಿ.ಸಿ.ಎಸ್. ಲೇಔಟ್, ಬೆಂಗಳೂರು ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ 2016-17ನೇ ಸಾಲಿನ ಆಯವ್ಯಯದಲ್ಲಿ ಈಗಾಗಲೇ ಹಂಚಿಕೆಯಾಗಿರುವಂತೆ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/68/2016-17***

ಆಯುಕ್ತರ ದಿನಾಂಕ: 06.09.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ (ರಿ), ಬೆಂಗಳೂರು ರವರ ಕೋರಿಕೆಯ ಮೇರೆಗೆ, ಪೂಜ್ಯ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದರಿ ಸಂಸ್ಥೆಯ ವತಿಯಿಂದ ನಡೆಸಲಾಗುತ್ತಿರುವ ಅಖಿಲ ಭಾರತ ಪುರುಷ/ಮಹಿಳೆಯರ ಹೊನಲು ಬೆಳಕಿನ ರಾಷ್ಟ್ರೀಯ (ಮೇಯರ್ ಕಪ್-2016) ಕಬಡ್ಡಿ ಪಂದ್ಯಾವಳಿಯನ್ನು ಬಿ.ಟಿ.ಎಂ.ಲೇಔಟ್ ವಿಧಾನಸಭಾ ಕ್ಷೇತ್ರದ ಬಿ.ಟಿ.ಎಂ.ಬಡಾವಣೆ, 2ನೇ ಹಂತದಲ್ಲಿ ಬರುವ ಪಾಲಿಕೆಯ ವಿವೇಕಾನಂದ ಆಟದ ಮೈದಾನದಲ್ಲಿ ದಿನಾಂಕ: 25.08.2016 ರಿಂದ 28.08.2016 ರವರೆಗೆ ಅಖಿಲ ಭಾರತ ಪುರುಷ/ಮಹಿಳೆಯರ ಹೊನಲು ಬೆಳಕಿನ ರಾಷ್ಟ್ರೀಯ ಕಬಡ್ಡಿ ಅಸೊಸಿಯೇಷನ್ (ರಿ), ರವರಿಂದ ಆಯೋಜಿಸಲಾಗಿದ್ದು, ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.90.00 ಲಕ್ಷಗಳಿಗೆ ಅಂದಾಜು ವೆಚ್ಚಪಟ್ಟಿಯನ್ನು ಸಲ್ಲಿಸಿರುವ ಹಿನ್ನಲೆಯಲ್ಲಿ 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0262 ರಲ್ಲಿ ಮೀಸಲಿರಿಸಿದ್ದ ರೂ.50.00 ಲಕ್ಷಗಳ ಅನುದಾನದಲ್ಲಿ ಭರಿಸಿಕೊಂಡು ಕೊರತೆಯಿರುವ ರೂ.40.00 ಲಕ್ಷಗಳನ್ನು ಪಿ-0048ರಲ್ಲಿ ಮೀಸಲಿರಿಸಿರುವ ರೂ.500.00 ಲಕ್ಷಗಳ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಂಡು ಹಣ ಬಿಡುಗಡೆ ಮಾಡಲು ಪೂಜ್ಯ ಮಹಾಪೌರರು ಆದೇಶಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ಮೀಸಲಿರಿಸಿರುವ ರೂ.500.00 ಲಕ್ಷಗಳ ಅನುದಾನದಲ್ಲಿ ಕೊರತೆಯಿರುವ ರೂ.40.00 ಲಕ್ಷಗಳನ್ನು ಹೊಂದಣಿಕೆ ಮಾಡಿಕೊಂಡು ರೂ.90.00 ಲಕ್ಷಗಳ ಸಹಾಯಧನವನ್ನು ಮೆ॥ ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ (ರಿ) ರವರ ಹೆಸರಿನಲ್ಲಿ ಬಿಡುಗಡೆ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 06.09.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**(ಎಮ್. ಶಿವರಾಜು)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**